ಶ್ರೀ ಟಿ. ಎಂ. ಮಂಜುನಾಥ್.—ತಾವು ಅವಕಾಶ ಕೊಟ್ಟರೆ ನಮ್ಮದೇನೂ ಅಭ್ಯಂತರವಿಲ್ಲ. ತಾವು ದಯವಿಟ್ಟು ಅವಕಾಶ ಕೊಡಬೇಕು. ಇದು ರೈತರ ಅಗುಹೋಗುಗಳ ಪ್ರಶ್ನೆ, ಅವರ ಜೀವನ್ಮರಣದ ಪ್ರಶ್ನೆ. ಕರ್ನಾಟಕದ ರೈತರ ಪರವಾಗಿ ಕಳಕಳಿಯಿಂದ ಪ್ರಾರ್ಥನೆ ಮಾಡುತ್ತಾ ಇದ್ದೇನೆ. ಇದು ಅತಿ ಪ್ರಾಮುಖ್ಯವಾಗಿರತಕ್ಕಂಥಾದ್ದು. ಸದನ ನಡೆಯುವಂಥಾದ್ದು ಇನ್ನು ಮೂರು ದಿವಸ ಇದೆ. ಆದ್ದರಿಂದ ತಾವು ದೊಡ್ಡ ಮನಸ್ಸು ಮಾಡಿ ರೈತರ ಬಗ್ಗೆ ಮಾತನಾಡುವುದಕ್ಕೆ ಇವತ್ತಿನ ದಿವಸ ನಮಗೆ ಅವಕಾಶ ಕೊಡಲೇಬೇಕು. ನಮ್ಮ ಕಷ್ಟಗಳು ತುಂಬ ಇವೆ.

ವರದಿಯನ್ನೊಪ್ಪಿಸುವುದು

ಶ್ರೀಮತಿ ಸಿ. ನಾಗಮ್ಮ ಕೇಶವಮೂರ್ತಿ (ಉಪಾಧ್ಯಕ್ಷರು) — ಖಾಸಗಿ ಸದಸ್ಯರ ವಿಧೇಯಕ ಹಾಗೂ ನಿರ್ಣಯಗಳ ಸಮಿತಿಯ ನಾಲ್ಕನೆಯ ವರದಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಶ್ರೀ ಎಂ. ಪಿ. ವೆಂಕಟೇಶ್.—ಮಾನ್ಯ ಅಧ್ಯಕ್ಷರೆ, ಖಾಸಗಿ ಸದಸ್ಯರ ವಿಧೇಯಕ ಹಾಗೂ ನಿರ್ಣಯಗಳ ಸಮಿತಿಯ ನಾಲ್ಕನೆಯ ವರದಿಯನ್ನು ಸಭೆ ಒಪ್ಪಬೇಕೆಂದು ಸೂಚಿಸುತ್ತೇನೆ.

ಶ್ರೀ ಟಿ. ಎಂ. ಮಂಜುನಾಥ್.—ದಯವಿಟ್ಟು ನಮಗೆ ಆಶ್ವಾಸನೆ ಕೊಡಬೇಕು, ಇಲ್ಲ ಅಂದರೆ ನಾವೇನೂ ಮಾಡುವುದಕ್ಕೆ ಆಗುವುದಿಲ್ಲ.

ಶ್ರೀ ಎಲ್. ಆರ್. ಶಿವರಾಮೇಗೌಡ.—ದಯಮಾಡಿ ನಮಗೆ ಅವಕಾಶ ಕೊಡಬೇಕು. ನಮ್ಮ ಕಳಕಳಿಯನ್ನು ನಿಮ್ಮ ಮುಂದೆ ಇಡುತ್ತಾ ಇದ್ದೇವೆ. ನೀವು ನಮಗೆ ಅವಕಾಶ ಕೊಡಬೇಕು.

ಶ್ರೀ ಟಿ. ಎಂ. ಮಂಜುನಾಥ್.—ಸರ್ಕಾರ ಇದರ ಬಗ್ಗೆ ಇಮವರೆಗೆ ಯಾವ ನಿರ್ಧಾರವನ್ನೂ ತೆಗೆದುಕೊಂಡಿಲ್ಲ. ದಯಮಾಡಿ ಅವಕಾಶ ಕೊಡಬೇಕು.

ಶ್ರೀ ಎಲ್. ಆರ್. ಶಿವರಾಮೇಗೌಡ.—ರೈತರ ಕಷ್ಟ ತಮಗೆ ಅರ್ಥವಾಗಿದೆ, ನಾವು ಮತ್ತೆ ಹೇಳಬೇಕಾದ್ದಿಲ್ಲ. ರೈತರಿಗೆ ಏನು ಅನ್ಯಾಯವಾಗಿದೆ ಅದರ ಬಗ್ಗೆ ಚರ್ಚೆಯಾಗಬೇಕು.

ಶ್ರೀ ಟಿ. ಎಂ. ಮಂಜುನಾಥ್,—ಮಾನ್ಯ ಅಧ್ಯಕ್ಷರೆ, ಈ ಸಭೆಗೆ ಅಡ್ಡಿ ಮಾಡಬೇಕು ಎಂದು ಇಲ್ಲ. ನಾನು ತಮ್ಮಲ್ಲಿ ಪ್ರಾರ್ಥನೆ ಮಾಡುತ್ತಾ ಇದ್ದೇನೆ. ಅತಿ ಪ್ರಮುಖವಾಗಿರತಕ್ಕಂಥಾದ್ದು. ರೈತರ ಹಿತವನ್ನು ಕಾಪಾಡತಕ್ಕಂಥಾದ್ದು. ತಾವು ಅಪ್ಪಣೆ ಕೊಡಬೇಕಾಗಿದೆ. ನಾವು ಕಳಕಳಿಯಿಂದ ಪ್ರಾರ್ಥನೆ ಮಾಡುತ್ತಾ ಇದ್ದೇವೆ. ತಾವು ದೊಡ್ಡ ಮನಸ್ಸು ಮಾಡಬೇಕು.

ಶ್ರೀ ಎಲ್. ಆರ್. ಶಿವರಾಮೇಗೌಡ.—ಅಧ್ಯಕ್ಷರೆ, ರಾಜ್ಯದಲ್ಲಿ ಇದಕ್ಕಿಂತ ಪ್ರಾಮುಖ್ಯವಾದ ವಿಚಾರ ಚರ್ಚೆ ನಡಾಯುವಂಥಾದ್ದು ಇನ್ಯಾವುದಿದೆ ಹೇಳಿ. ೫-೬ ಜಿಲ್ಲೆಗಳಲ್ಲಿ ರೈತರು ಹಾಳಾಗಿ ಹೋಗತಕ್ಕಂಥ ಪರಿಸ್ಥಿತಿ ಬಂದಿದೆ.

ಶ್ರೀ ಟಿ. ಎಂ. ಮಂಜುನಾಥ್.—ಇದು ರೈತ ಕುಟುಂಬದ ಪ್ರಶ್ನೆ ವಿಚಾರ. ದಯಮಾಡಿ ತಾವು ಅವಕಾಶ ಮಾಡಿಕೊಡಬೇಕು. ಸರ್ಕಾರ ಕೊಬರಿ ಧಾರಣೆ ಬಗ್ಗೆ ಒಂದು ಸ್ಟೇಟ್‌ಮೆಂಟ್ ಕೊಟ್ಟರೆ ನಮ್ಮದೇನೂ ಅಭ್ಯಂತರವಿಲ್ಲ.

ಪ್ರೊ॥ ಎಂ. ಡಿ. ನಂಜುಂಡಸ್ವಾಮಿ.—ಸನ್ಮಾನ್ಯ ಸಭಾಧ್ಯಕ್ಷರೆ, ನನ್ನದು ಒಂದು ಮನವಿ. ಇದು ಸುಮಾರು ೪-೫ ಜಿಲ್ಲೆಗಳಲ್ಲಿರುವ ರೈತರ ಜೀವನ್ಮರಣದ ಪ್ರಶ್ನೆಯಾಗಿದೆ. ತಮ್ಮ ಮುಖಾಂತರ ನಾನು ಮಾನ್ಯ ಕೃಷಿ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಇವತ್ತಿನ ದಿವಸ ತಮ್ಮ ಕಲಾಪ ಏನಿದೆ ಅದರಲ್ಲಿ ಸ್ವಲ್ಪ ಕಾಲಾವಕಾಶ ಮಾಡಿಕೊಟ್ಟು ತೆಂಗು ಮತ್ತೆ ಕೊಬರಿ ಧಾರಣೆ ಬಗ್ಗೆ ಚರ್ಚೆ ಮಾಡಿ ನಾವು ಒಂದು ತೀರ್ಮಾನಕ್ಕೆ ಬರಲೇಬೇಕಾಗುತ್ತದೆ. ಆದಕಾರಣ ನಾನು ತಮ್ಮ ಮೂಲಕ ಮಾನ್ಯ ಮಂತ್ರಿಗಳಲ್ಲಿ ವಿನಂತಿಮಾಡಿಕೊಳ್ಳುತ್ತೇನೆ. ತಾವು ಇದಕ್ಕೆ ಅವಕಾಶ ಮಾಡಿಕೊಡಬೇಕು.

ಒಬ್ಬ ಮಾನ್ಯ ಸದಸ್ಯರು.—ಉತ್ತರ ಕರ್ನಾಟಕದ ೪-೫ ಜಿಲ್ಲೆಗಳಲ್ಲಿ ಜೋಳದ ಧಾರಣೆ ಬಹಳ ಕಡಿಮೆ ಇರುವುದರಿಂದ ರೈತರು ಕಂಗಾಲಾಗಿದ್ದಾರೆ. ದಯವಿಟ್ಟು ಇವರ ಬಗ್ಗೆ ಮಾನ್ಯ ಕೃಷಿ ಮಂತ್ರಿಗಳು ಗಮನ ಕೊಡಬೇಕು ಎಂದು ತಮ್ಮ ಮುಖಾಂತರ ವಿನಂತಿಮಾಡಿಕೊಳ್ಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಮಾನ್ಯ ಅಧ್ಯಕ್ಷರೆ...

ಅಧ್ಯಕ್ಷರು.—ನೀವು ಕಬ್ಬು, ಬೆಲ್ಲ, ಯಾವುದಾದರೂ ವಿಚಾರ ಮಾತನಾಡುತ್ತೀರ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.- ಇವತ್ತು ಡಿಮ್ಯಾಂಡ್ಸ್ ಇದೆಯಲ್ಲ ಅದರಲ್ಲಿ ಎಲ್ಲರೂ ಮಾತನಾಡಬಹುದು. ಅಗ್ರಿಕಲ್ಚರ್, ಹಾರ್ಟಿಕಲ್ಚರ್ ಇದೆ, ಜೇಫ್ ಮಿನಿಸ್ಟರ್ ಮತ್ತು ರೂರಲ್ ಡೆವಲಪ್‌ಮೆಂಟ್ ಮಿನಿಸ್ಟರ್‌ದು ಇದೆ, All demands are there ರಾತ್ರಿ ೧೨ ಗಂಟೆವರೆಗೂ ಕೂಡಬಹುದು.

ಅಧ್ಯಕ್ಷರು.—ಈಗತಾನೆ ತಾವು ಕೊಬರಿ ಬೆಲೆ ಇಳಿದುಹೋಗಿದೆ, ಚರ್ಚೆ ಮಾಡಬೇಕು ಎಂದು ನನ್ನನ್ನು ಕೇಳಿದಾಗ ನಾನು ತಮಗೆ ಸೂಚಿಸಿದೆ. ಸದನದ ಮುಂದೆ ವ್ಯವಸಾಯ ಮತ್ತಿತರ ಬೇಡಿಕೆಗಳಿವೆ, ಕೊಬರಿ, ತೆಂಗಿನಕಾಯಿ, ತೆಂಗಿನ ಮರ ಇವೆಲ್ಲ ವ್ಯವಸಾಯಕ್ಕೆ ಸೇರಿರತಕ್ಕ ವಿಚಾರಗಳೇ ಅಲ್ಲವೆ. ಆದುದರಿಂದ ನಾನು ತಮಗೆ ಸೂಚ್ಯವಾಗಿ ತಿಳಿಸಿದೆ. ಇದಕ್ಕೆ ಸಂಬಂಧಪಟ್ಟ ಬೇಡಿಕೆ ಇದೆ, ನಿಮ್ಮನ್ನು ಭಾಷಣ ಮಾಡುವುದಕ್ಕೆ ಕರೆಯುತ್ತೇನೆ, ಇದನ್ನೇ ಒಂದು ಕೇಂದ್ರಬಿಂದುವನ್ನಾಗಿ ಮಾಡಿಕೊಂಡು ನೀವು ಭಾಷಣ ಮಾಡಬಹುದು ಎಂದು ಸೂಚಿಸಿದೆ.

ಶ್ರೀ ಎಲ್. ಆರ್. ಶಿವರಾಮೇಗೌಡ.— ಈಗಾಗಲೇ ಕೆಲವು ಬೇಡಿಕೆಗಳ ಮೇಲೆ ತಾವು ಅವಕಾಶ ಕೊಟ್ಟಿದ್ದೀರಿ. ಆದರೆ ಇಲಾಖೆ ಬೇಡಿಕೆಗಳ ಮೇಲೆ ಅವಕಾಶ ಕೊಡತಕ್ಕಂಥ ಸಂದರ್ಭದಲ್ಲಿ ಬೃಹದಾಕಾರವಾಗಿರತಕ್ಕಂಥ ಕೊಬರಿ ಬೆಲೆ ನಿಯಂತ್ರಣ ಮಾಡತಕ್ಕಂಥ ವಿಚಾರ ಮೇಲೆ ಬೆಳಕು ಚೆಲ್ಲುವುದಕ್ಕೆ ಸಾಧ್ಯವಾಗುವುದಿಲ್ಲ. ತಾವು ನಮ್ಮ ರಕ್ಷಣೆಗೆ ಬರಬೇಕಾಗಿದೆ. ಇವತ್ತು ನಾವು ಹಳ್ಳಿಗಳಿಗೆ ಹೋದಾಗ ಜನ ಕೇಳುತ್ತಾರೆ. ನಮ್ಮನ್ನು ಪೋಲೀಸರು ಏನಾದರೂ ಬಂಧಿಸಬೇಕಾದರೆ ತಮ್ಮ ಪರ್ಮಿಷನ್ ಬೇಕು. ಆದರೆ ನಮ್ಮ ಕಷ್ಟ...

ಅಧ್ಯಕ್ಷರು.—ಹೊಗಡೆ ಬಂಧಿಸಿ ನನಗೆ ತಿಳಿಸಬೇಕು ಅಷ್ಟೆ.

ಶ್ರೀ ಎಲ್. ಆರ್. ಶಿವರಾಮೇಗೌಡ.—ತಮ್ಮ ಪರ್ಮಿಷನ್ ಇಲ್ಲದೆ ಮಾಡುವುದಕ್ಕಾಗುವುದಿಲ್ಲ. ಇವತ್ತು ನಾವು ಅಲ್ಲಿಗೆ ಹೋದರೆ...

ಶ್ರೀ ವಾಟಾಳ್ ನಾಗರಾಜ್.—ಹೊರಗೆ ಬಂಧಿಸುವುದಕ್ಕೆ ತಮ್ಮ ಅಪ್ಪಣೆ ಬೇಕಾದರೆ ಯಾರು ಏನು ಬೇಕಾದರೂ ಮಾಡಬಹುದು. ಆದರೆ ಒಳಗೆ ಬಂಧಿಸುವುದಕ್ಕೆ ಮಾತ್ರ ತಮ್ಮ ಪರ್ಮಿಷನ್ ಬೇಕು.

ಅಧ್ಯಕ್ಷರು.—ವಾಟಾಳ್ ನಾಗರಾಜ್‌ರವರು ಹಿರಿಯ ಸದಸ್ಯರಿದ್ದಾರೆ ಈ ವಿಚಾರವನ್ನು ಅವರಿಂದ ಕೇಳಿ ತಿಳಿದುಕೊಳ್ಳಿ

ಶ್ರೀ ಎಲ್. ಆರ್. ಶಿವರಾಮೇಗೌಡ.—ಸ್ವಾಮಿ, ನಾವು ಹಳ್ಳಿಗೆ ಹೋಗುವುದಕ್ಕಾಗುವುದಿಲ್ಲ ನಮ್ಮನ್ನು ರೈತರು ಬಂಧಿಸುತ್ತಾರೆ.

ಅಧ್ಯಕ್ಷರು.—ಮಂಜುನಾಥ್‌ರವರೇ, ಶಿವರಾಮೇಗೌಡರು ಹೊಸ ಸದಸ್ಯರು. ನೀವು ಹಳೆ ಸದಸ್ಯರಲ್ಲವೆ?

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸಭಾಧ್ಯಕ್ಷರೆ. ಇದು ಪ್ರಾಮುಖ್ಯವಾದ ವಿಚಾರ ಎನ್ನುವುದರಲ್ಲಿ ಎರಡು ಮಾತಿಲ್ಲ, ನಾವು ಕೂಡ ಭಾಗಿಯಾಗಿದ್ದೇವೆ. ಈ ವಿಷಯ ಹಿಂದೆ ಸದನದಲ್ಲೇ ಕೂಡ ಚರ್ಚೆಯಾಗಿತ್ತು. ಈ ವಿಷಯವನ್ನು ಮಾನ್ಯ ಶಿವರಾಮೇಗೌಡರು ಮತ್ತು ಉಳಿದಂಥ ಸದಸ್ಯರುಗಳು ಪ್ರಸ್ತಾಪ ಮಾಡಿದ್ದಾರೆ. ಆ ಸಂದರ್ಭದಲ್ಲಿ ಇದರ ಬಗ್ಗೆ ಸಂಬಂಧಪಟ್ಟವರ ಸಭೆಯನ್ನು ಎರಡು ದಿವಸದಲ್ಲಿ ಕರೆದು ಮಾತನಾಡುತ್ತೇವೆಂದು ಹೇಳಿದೆ. ಆದರೆ, ಒಂದೇ ದಿವಸದಲ್ಲಿ ಸಭೆ ಕರೆದೆ ಆ ದಿವಸ ಮಾನ್ಯ ಸದಸ್ಯರುಗಳು ಎಲ್ಲರೂ ಇದ್ದರು. ಆಮೇಲೆ ಒಂದು ಅಭಿಪ್ರಾಯ ಒಡಮೂಡಿ ಬಂದಿತ್ತು. ಎ. ಪಿ. ಎಂ. ಸಿ. ಯಲ್ಲಿ ಟ್ಯಾಕ್ಸ್ ಸೋರಿಹೋಗತಕ್ಕಂತಾದ್ದು, ವರ್ತಕರುಗಳು, ಮಧ್ಯಸ್ಥಿಕೆಗಾರರು ಏನೇನು ಮಾಡುತ್ತಾರೆ ಎನ್ನುವುದು ಇನ್ನೂ ಸಾಕಷ್ಟು ವ್ಯವಹಾರಗಳು ಪ್ರಸ್ತಾಪಕ್ಕೆ ಬಂದವು. ಆ ಸಂದರ್ಭದಲ್ಲಿ ಮಾನ್ಯ ಸದಸ್ಯರುಗಳು ಮೊಳಿಂಡರುಗಳು, ರೈತರ ಬಗ್ಗೆ ಕಳಕಳಿ ಹೊಂದಿರತಕ್ಕವರು ಅಷ್ಟೇ ಅಲ್ಲದೆ, ಕಾನೂನು ವಿಚಾರ ಕೂಡ ಚರ್ಚೆಗೆ ಬಂದು, ಮತ್ತೊಂದು ಸಭೆ

ಕರೆಯಬೇಕಾಗುತ್ತದೆ. ಇಷ್ಟಕ್ಕೆ ಜೊತೆಕಟ್ಟಿ ಮಾಡಬಾರದು ಎನ್ನುವ ವಿಚಾರವೂ ಬಂತು. ಮತ್ತೊಂದು ಸಭೆಯನ್ನು ಕರೆಯಬೇಕಾಗಿದೆ. ಹಣಕಾಸಿನ ಸಚಿವರನ್ನು ಪಾರ್ಕೆಟಿಂಗ್ ಸಚಿವರನ್ನು, ಉಳಿದಿರತಕ್ಕಂಥವರನ್ನು ಒಳಗೊಂಡಂತೆ ಎಲ್ಲರನ್ನೂ ಕರೆದು ಸಭೆ ಮಾಡಬೇಕೆಂದು ತೀರ್ಮಾನ ಮಾಡಿದ್ದಾರೆ. ಈ ವಿಚಾರದ ಬಗ್ಗೆ ಸಂಬಂಧಪಟ್ಟ ಸಚಿವರ ಹತ್ತಿರ ಮಾತನಾಡಿದ್ದೇನೆ. ಸಭೆಯನ್ನು ಆದಷ್ಟು ಶೀಘ್ರವಾಗಿ ಕರೆಯತಕ್ಕ ಪ್ರಯತ್ನ ಮಾಡಿದರೂ ಕಾಲದ ಅಭಾವದಿಂದ ಆಗಿಲ್ಲ, ಸಭೆಗೆ ಬರುವುದಕ್ಕಾಗುವುದಿಲ್ಲವೆಂದು ಮಂತ್ರಿ ಮಿತ್ರರೂ ಹೇಳಿಲ್ಲ. ಮಾಡೋಣ ಎಂದು ಹೇಳಿದ್ದಾರೆ. ಸರ್ಕಾರಕ್ಕೆ ಹೆಚ್ಚಿನ ವರಮಾನ ಬರತಕ್ಕ ವಿಚಾರ ಕೂಡ ಇದೆ. ರೈತರ ಬೆಳೆಗೆ ಜಾಸ್ತಿ ಬೆಲೆಯನ್ನು ಕೊಡತಕ್ಕ ವಿಚಾರ ಕೂಡ ಇದೆ. ಕಾಲದ ಅಭಾವದಿಂದ ಮಾತ್ರ ಸೇರುವುದಕ್ಕೆ ಸಾಧ್ಯವಾಗಿಲ್ಲ. ಈ ಮಧ್ಯೆ ಇವತ್ತು ಚರ್ಚೆ ಏನು ನಡೆಯುತ್ತಿದೆ ಅದರಲ್ಲಿ ರೈತರಿಗೆ ಏನು ಅನ್ಯಾಯವಾಗಿಬಿಟ್ಟಿದೆ ಅದರ ಬಗ್ಗೆ ವಿವರಗಳನ್ನು ಇಟ್ಟುಕೊಂಡು ಮಾತನಾಡುವುದಕ್ಕೆ ಕಾಲಾವಕಾಶವನ್ನು ಅಪೇಕ್ಷೆಯನ್ನು ತಾವು ಮಾನ್ಯ ಸದಸ್ಯರುಗಳಿಗೆ ಕೊಟ್ಟಿದ್ದೀರಿ. ಅದರ ಜೊತೆಯಲ್ಲಿ ರೂಲ್ ೬೮ರ ಪ್ರಕಾರ ರೈತರು ಬೆಳೆದ ಬೆಳೆಗಳಿಗೆ ನ್ಯಾಯವಾದ ಬೆಲೆ ಕೊಡುವುದಕ್ಕೋಸ್ಕರ ಒಂದು ವಿಚಾರವನ್ನು ತಂದಿದ್ದರು. ಪ್ರೊಫೆಸರ್ ನಂಜುಂಡ ಸ್ವಾಮೀಜಿಯವರಿಂದಲೂ ಬಂದಿತ್ತು. ಅದು ಹೋಯಿತು, ಬಹಳ ಲೇಟಾಗುತ್ತೆ, ಕಾಳಿತುಕೊಳ್ಳುವುದ ಕ್ಕಾಗುವುದಿಲ್ಲ ಎಂದು ತಿಳಿಸಿದ ಮೇಲೆ ಪ್ರೊಫೆಸರ್‌ರವರು ತಕರಾರು ಇಲ್ಲ ಎನ್ನುವ ಅಭಿಪ್ರಾಯವನ್ನು ಕೊಟ್ಟರು. ಸದನ ಮುಗಿಯುವುದರೊಳಗೆ ಇದರ ಬಗ್ಗೆ ಚರ್ಚೆಯಾಗಬೇಕೆಂಬ ತರಾತುರಿ ಸದಸ್ಯರು ಗಳದ್ದೂ ಇದೆ ಪ್ರೊಫೆಸರದ್ದೂ ಇದೆ. ನಿನ್ನೆಮೊನ್ನೆ ಮಾತನಾಡುವಾಗ ಸೂಚನೆ ಕೊಟ್ಟ ರೈತರ ಬೆಳೆಗೆ ಬೆಲೆ ಕೊಡತಕ್ಕಂಥಾದ್ದು ಕೃಷಿ ಇಲಾಖೆಗೆ ಸಂಬಂಧಪಟ್ಟ ಹಾಗೆ ಬರುತ್ತೆ ದಯವಿಟ್ಟು ಅದರಲ್ಲಿ ಚರ್ಚೆಮಾಡೋಣ ರೂಲ್ ೬೮ರ ಪ್ರಕಾರ ಇಟ್ಟರೂ ಕೂಡ ನಾವು ಹೆಚ್ಚು ದಿವಸ ಕಾಳಿತುಕೊಳ್ಳುತ್ತಾ ಇಲ್ಲ ಪ್ರತ್ಯೇಕವಾಗಿ ಸಮಯ ನಿಗದಿ ಮಾಡುವುದಕ್ಕೂ ಅಧ್ಯಕ್ಷರಿಗೆ ಕ್ಷೇಮವಾಗುತ್ತದೆಂದು ವಿನಂತಿಸಿಕೊಳ್ಳುತ್ತೇನೆ. ಪ್ರೊಫೆಸರ್ ಒಬ್ಬರು ಮಾತ್ರವಲ್ಲ, ಮಾನ್ಯ ಮಿತ್ರರಿಗೂ ಕೂಡ ಎಲ್ಲ ಸದಸ್ಯರು ಭಾಗವಹಿಸುವಂಥ ಸದವಕಾಶ. ಸದುಪಯೋಗ ಆಗಬೇಕೆಂಬುದು ಸರ್ಕಾರದ ಆಸೆ ಇದೆ. ತಾವು ಚರ್ಚೆ ಮಾಡತಕ್ಕ ಎಲ್ಲ ವಿಚಾರಗಳಿಗೂ ಪ್ರಾಮಾಣಿಕವಾಗಿ ಉತ್ತರ ಕೊಡತಕ್ಕ ಪ್ರಯತ್ನ ಮಾಡುತ್ತೇನೆ. ತಾವು ಪ್ರತ್ಯೇಕ ರೂಲ್ ೬೮ರ ಪ್ರಕಾರ ತೆಗೆದುಕೊಂಡರೂ ರೆಡಿ ಇದ್ದೇನೆ. ಸರ್ಕಾರ ರೆಡಿ ಇದೆ. ಕಾಲದ ಅಭಾವದಿಂದ ರೂಲ್ ೬೮ಕ್ಕೆ ರೀಚಾಗುತ್ತಿಲ್ಲ ಎನ್ನುವ ಭಾವನೆ ಇದೆ. ಕೊಬ್ಬರಿ ವಿಚಾರದಲ್ಲಿ ಪ್ರಸ್ತಾಪ ಮಾಡಿದ್ದೀರಿ. ಮತ್ತೊಂದು ಸಭೆ ಕರೆದು ಚರ್ಚೆಮಾಡಿ ತೀರ್ಮಾನ ಮಾಡಬೇಕಾಗುತ್ತದೆ. ಆ ರೀತಿ ಸಭೆಯನ್ನು ನಾವು ಕರೆಯುತ್ತೇವೆ. ಶ್ರೀಮಾನ್ ಮಂಜುನಾಥ್‌ರವರೆ ತಮಗೆ ಈ ವಿಚಾರ ಗಮನಕ್ಕೆ ತರುತ್ತಿದ್ದೇನೆ. ಸದನ ಎಷ್ಟು ದಿವಸ ಮುಂದುವರಿಯುತ್ತೋ ಗೊತ್ತಿಲ್ಲ. ಆದಷ್ಟು ಈ ಸದನ ಮುಗಿಯುವುದರೊಳಗೆ ಸಭೆ ಕರೆಯಬೇಕೆಂಬ ಆಸೆ ಇಟ್ಟುಕೊಂಡೆ ಈ ಪ್ರಯತ್ನವನ್ನು ಮಾಡುತ್ತಿದ್ದೇವೆ. ಈ ವಿಷಯವನ್ನು ಮಾನ್ಯ ಸದಸ್ಯರುಗಳ ಗಮನಕ್ಕೆ ತಮ್ಮ ಮುಖಾಂತರ ತರುತ್ತಿದ್ದೇನೆ.

ಶ್ರೀ ಎಲ್. ಆರ್. ಶಿವರಾಮೇಗೌಡ.—ಈಗ ಏನಾಗಿದೆ ಅಂದರೆ, ದಯವಿಟ್ಟು ನಾವು ಒಂದು ತಿಂಗಳ ಮುಂಚೆ ಕೊಬರಿ ಬೆಲೆಯಿಂದ ರೈತರಿಗೆ ಅನ್ಯಾಯವಾದಂತೆ ಸರ್ಕಾರ ಒಂದು ನಿಲುವು ತೆಗೆದು ಕೊಳ್ಳಬೇಕು ಸರ್ಕಾರ ಸಪ್ಲೈಟ್ ಪ್ರೈಸ್ ಅನೌನ್ಸ್ ಮಾಡಬೇಕು ಎಂದು ಇಲ್ಲಿ ಪ್ರಸ್ತಾಪ ಮಾಡಿದಾಗ ಒಂದು ದಿವಸ ಸಭೆ ಕರೆದು ನಮಗೆಲ್ಲರಿಗೂ ಸಮಾಧಾನ ಆಗುವ ರೀತಿಯಲ್ಲಿ ತಾವು ಚರ್ಚೆ ಮಾಡಿಸಿದಿರಿ ಅದರ ಬಗ್ಗೆ ಯಾರೂ ಸಂಕೋಚ ವ್ಯಕ್ತಪಡಿಸುತ್ತಿಲ್ಲ. ಕೊಬರಿ ಮಾರಾಟ ಮಾಡತಕ್ಕಂಥಾದ್ದು ಮೇ ತಿಂಗಳಿನಿಂದ ಆಗಸ್ಟ್ ತಿಂಗಳಿಗೆ ಕ್ಲೋಸ್ ಆಗುತ್ತದೆ. ಈ ಒಂದು ವರ್ಷದ ಅವಧಿಗೆ ಬಿಟ್ಟರೆ ರೈತ ಇನ್ನೊಂದು ವರ್ಷ ಕಾಯಬೇಕಾಗುತ್ತದೆ. ಆದ್ದರಿಂದ ಅದಕ್ಕಾಗಿ ಒಂದು ಟೈಮ್ ಫಿಕ್ಸ್ ಮಾಡಿಕೊಡಿ.

ಶ್ರೀ ಪಾಟಾಳ್ ನಾಗರಾಜ್.—ಅಧ್ಯಕ್ಷರೆ.....

ಶ್ರೀ ಎಲ್. ಆರ್. ಶಿವರಾಮೇಗೌಡ.—ಮಾನ್ಯ ಪಾಟಾಳ್ ನಾಗರಾಜ್ ಅವರೇ ಇದರ ಬಗ್ಗೆ ತಾವು ಸ್ವಲ್ಪ ಹೇಳಬೇಕಾಗುತ್ತದೆ.

ಶ್ರೀ ಪಾಟಾಳ್ ನಾಗರಾಜ್.—ಈಗ ಅಧ್ಯಕ್ಷರು, ಮೌನವಾಗಿದ್ದಾರೆ, ನನಗೆ ಭಯವಾಗುತ್ತಿದೆ ದಯವಿಟ್ಟು ಈಗ ತಾವು ಕಾಳಿತುಕೊಂಡುಬಿಡಿ. ಆವರ ಅಪ್ಪಣೆ ಕೇಳಿಕೊಂಡು ನಾವು ಮಾತನಾಡೋಣ ಈಗ ಅಧ್ಯಕ್ಷರ ಮನಸ್ಸು ನೋಯಿಸುವುದು ಬೇಡ ಎಂದು ನನಗನ್ನಿಸುತ್ತದೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರ ಮೂಲಕ ಮಾನ್ಯ ಸದಸ್ಯರಿಗೆ ನಾನು ಪುನಃ ವಿನಂತಿ ಮಾಡಿಕೊಳ್ಳುತ್ತೇನೆ ನಾನು ಈಗಾಗಲೇ ಹೇಳಿದ್ದೇವೆ, ಈ ಸದನ ಮುಗಿಯುವುದರೊಳಗಾಗಿ

ಸಭೆಯನ್ನು ಕರೆಯತಕ್ಕಂಥ ಪ್ರಯತ್ನದಲ್ಲಿ ನಾವು ಈಗಾಗಲೇ ಇದ್ದೇವೆ ಈಗ ಕಾಲವನ್ನು ಮಾನ್ಯ ಅಧ್ಯಕ್ಷರು ನಿಗದಿಮಾಡಿದ್ದರೂ ಕೂಡ ಚರ್ಚೆ ಆಗಬಹುದೇ ವಿನಹ ಮತ್ತೆ ಸೋರಿಕೆ ವಿಚಾರದಲ್ಲಿ, ಮತ್ತೊಂದರಲ್ಲಿ ಸಭೆ ಮಾಡುವುದಕ್ಕೆ ಕಾಲ ಕಡಿಮೆ ಇರುವುದರಿಂದ ಸಾಧ್ಯವಾಗುತ್ತಿಲ್ಲ, ಅದನ್ನು ತಾವು ಒಪ್ಪುತ್ತೀರಿ ಎಂದು ನಾನು ಭಾವಿಸಿದ್ದೇನೆ. ಆದ್ದರಿಂದ, ನಾಳೆ ಆಗಲಾರದು. ಸೋಮವಾರ ಸಭೆ ಕರೆಯತಕ್ಕ ವಿಚಾರ ನಾವು ಮಾಡಿಬಿಡೋಣ, ಸೋಮವಾರ ಸೇರೋಣ.

ಶ್ರೀ ಎಲ್. ಆರ್. ಶಿವರಾಮೇಗೌಡ.—ಇವೊತ್ತು ರೈತರಿಗೆ ಸಹಕಾರ ಮಾಡದೇ ಹೋದರೆ ಇನ್ನು ಮೂರು ನಾಲ್ಕು ತಿಂಗಳಲ್ಲಿ ಏನು ಪ್ರಯೋಜನ ಆಗುತ್ತದೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸದಸ್ಯರ ಕಳಕಳಿಯನ್ನು ನಾನು ಒಪ್ಪುತ್ತೇನೆ. ಅದು ಆ ಕಾಲದಲ್ಲಿ ಮಾತ್ರ ಸೇಲ್ ಆಗುತ್ತದೆ, ಆನಂತರ ಅದು ಉಪಯೋಗವಾಗುವುದಿಲ್ಲ. ಸೋಮವಾರ ದಿವಸ ನಾನು ಮಿಟಿಂಗ್ ಕರೆಯತಕ್ಕಂಥ ಪ್ರಯತ್ನ ಮಾಡುತ್ತೇನೆ ಸೋಮವಾರದ ದಿವಸ ಪ್ರತ್ಯೇಕವಾಗಿ, ಸಂಬಂಧಪಟ್ಟಿರತಕ್ಕ ತಾಸಕರ ಸಭೆಯನ್ನು ಕರೆಯುತ್ತೇವೆ. ಮತ್ತು ವಿವರಗಳನ್ನೆಲ್ಲ ಇಟ್ಟು ತೀರ್ಮಾನ ಮಾಡುತ್ತೇವೆ. ಹಾಗೂ ಅದು ಏನಾಗಿದೆ ಎನ್ನುವುದನ್ನು ಈ ಸದನ ಮುಂಗಿಯುವುದರೊಳಗೆ ತಿಳಿಸತಕ್ಕಂಥ ಪ್ರಯತ್ನ ನಾವು ಸರ್ಕಾರದವರು ಮಾಡುತ್ತೇವೆ.

ಶ್ರೀ ಕೆ. ಲಕ್ಕಪ್ಪ.—ಮಾನ್ಯ ಅಧ್ಯಕ್ಷರೆ, ಮಳೆ ಬಾರದೇ ಇರತಕ್ಕ ಸ್ಥಳಗಳಲ್ಲಿ ಬೇರೆ ವ್ಯವಸ್ಥೆಯನ್ನು ಮತ್ತು ದನಕರುಗಳಿಗೆ ನೀರು, ಜನರಿಗೆ ಆಹಾರ ವಿತರಣೆ ಮಾಡತಕ್ಕಂತಾದ್ದು, ಜನರಿಗೆ ಕಾಮಗಾರಿ ಕೆಲಸ ಕೊಡತಕ್ಕದ್ದು ಮಾಡಬೇಕು. ಈಗ ಜನರು ಕೆಲಸ ಇಲ್ಲದೇ ಬಹಳ ಕಷ್ಟ ಪರಿಸ್ಥಿತಿಯಲ್ಲಿದ್ದಾರೆ. ಸರ್ಕಾರ ಇವರ ಬಗ್ಗೆ ಚರ್ಚೆ ಮಾಡಲಿಕ್ಕೆ ಅವಕಾಶ ಮಾಡಿಕೊಡಬೇಕೆಂದು ಒತ್ತಾಯ ಮಾಡುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಅದೇ ಚರ್ಚೆ ಇವೊತ್ತು ಪ್ರಾರಂಭವಾಗುತ್ತಿದೆ. ದಯವಿಟ್ಟು ತಾವು ಕೂಡ ಚರ್ಚೆಯಲ್ಲಿ ಭಾಗವಹಿಸಿ ತಮ್ಮ ಅಮೂಲ್ಯ ಸಲಹೆಗಳನ್ನು ನೀಡಬೇಕೆಂದು ಸರ್ಕಾರದ ಪರವಾಗಿ ವಿನಂತಿ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು. ಇವೊತ್ತು ಗ್ರಾಮಾಭಿವೃದ್ಧಿ ಮತ್ತು ಉದ್ಯೋಗ, ಭೂಸಾರ ಮತ್ತು ಜಲರಕ್ಷಣೆ, ಖುಷ್ಕಿಭೂಮಿ, ತೋಟಗಾರಿಕೆ, ಜೈಲು ಇದೆಲ್ಲಾ ಇವತ್ತು ಇದೆ ಆದ್ದರಿಂದ ಮಾತನಾಡಬಹುದು.

ಶ್ರೀ ಪಾಟಾಳ್ ನಾಗರಾಜ್.—ಮಾನ್ಯ ಅಧ್ಯಕ್ಷರೆ, ಇವತ್ತು ಗ್ರಾಮಾಭಿವೃದ್ಧಿಯಿಂದ ಹಿಡಿದು ಜೈಲಿನವರೆಗೂ ಬೇಡಿಕೆಗಳು ಇವೆ. ನಾವು ಎಲ್ಲಿಗೆ ಬೇಕಾದರೂ ಹೋಗಬಹುದು. ನಾವು ಗ್ರಾಮಾಭಿವೃದ್ಧಿಯಲ್ಲಿ ನಿಲ್ಲಬಹುದು. ಇಲ್ಲವೇ ಜೈಲಿಗೆ ಬೇಕಾದರೂ ಹೋಗಬಹುದು. ಅಂಥ ಪರಿಸ್ಥಿತಿ ಇವತ್ತು ಉದ್ಭವವಾಗಿದೆ ಇವತ್ತು ಸುಪಾರು ೫ ಜನ ಸಚಿವರನ್ನೂ ಒಟ್ಟಿಗೆ ಕೂಡಿಸಲಾಗಿದೆ. ಈಗ ನಾವು ಯಾವುದರ ಬಗ್ಗೆ ಮಾತನಾಡಬೇಕು, ಯಾವುದನ್ನು ಬಿಡಬೇಕು ಎನ್ನುವುದೇ ಒಂದು ದೊಡ್ಡ ಸಮಸ್ಯೆಯಾಗಿದೆ.

ಅಧ್ಯಕ್ಷರು.—ಅದಕ್ಕೇ ಪಿಕ್ ಅಂಡ್ ಚೂಸ್ ಎನ್ನುವುದು.

ಶ್ರೀ ಪಾಟಾಳ್ ನಾಗರಾಜ್.—ಪ್ರತಿಯೊಂದು ಬೇಡಿಕೆಯನ್ನೂ.....

ಶ್ರೀ ಕಾಗೋಡು ತಿಮ್ಮಪ್ಪ.—ಇಷ್ಟೊಂದು ಇಲಾಖೆಗಳ ಬೇಡಿಕೆಗಳನ್ನೂ ಒಟ್ಟಿಗೆ ಹಾಕಿ ಒಂದೇ ದಿವಸ ಚರ್ಚೆ ಮಾಡಿದ್ದನ್ನು ನಾನು ಎಲ್ಲೂ ಕೂಡ ನೋಡಿಲ್ಲ...

ಅಧ್ಯಕ್ಷರು.—ಒಂದೇ ದಿವಸ ಅಲ್ಲ. ಇವತ್ತೂ ಇದೆ, ಸೋಮವಾರವೂ ಇದೆ. ಮೂರು ದಿವಸ ಇದೆ.

ಶ್ರೀ ಕಾಗೋಡು ತಿಮ್ಮಪ್ಪ.—ಈ ಎಲ್ಲ ಖಾತೆಗಳಿಂದಲೂ ೫ ಜನ ಸಚಿವರಾಗುತ್ತಾರೆ. ಇಷ್ಟೂ ಮಂತ್ರಿಗಳ ಬೇಡಿಕೆಗಳನ್ನು ಒಟ್ಟಿಗೇ ಸೇರಿಸಿ ಚರ್ಚೆ ಮಾಡತಕ್ಕಂಥ ಸಂಪ್ರದಾಯವನ್ನು ನಾನು ನೋಡಿಲ್ಲ. ಆದ್ದರಿಂದ ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ದಯವಿಟ್ಟು ಈ ರೀತಿ ಮಾನ್ಯ ಸದಸ್ಯರ ಮೇಲೆ ಭಾರವನ್ನು ಹೊರಿಸುವುದು ಸರಿಯಲ್ಲ. ದಯವಿಟ್ಟು ತಾವು ನಮಗೆ ರಕ್ಷಣೆಯನ್ನು ಕೊಡ

ಬೇಕಿಲ್ಲ. ಯಾರ್ಯಾರು ಯಾವ ಯಾವ ಬೇಡಿಕೆಯ ಮೇಲೆ ಮಾತನಾಡಬೇಕು? ನಾನು ತಮಗೆ ಹೇಳುತ್ತೇನೆ. ಇಷ್ಟೇ ದಿವಸ ನಾವು ಅಧಿವೇಶದವನ್ನು ನಡೆಸಿದ್ದೇವೆ, ಇನ್ನು ಎರಡು ದಿವಸ ನಡೆಸಿದರೆ ಏಳು ತೊಂದರೆಯಾಗುತ್ತದೆ. ಉದಾಹರಣೆಗೆ ಗ್ರಾಮಾಣಾಭಿವೃದ್ಧಿ ಸಚಿವರ ಬೇಡಿಕೆಗಳು, ಕೃಷಿ ಸಚಿವರ ಬೇಡಿಕೆಗಳು, ಏನಿವೆ ಇವು ಇಡೀ ಕರ್ನಾಟಕ ರಾಜ್ಯದ ಜನತೆಗೆ ಸಂಬಂಧಪಟ್ಟವು. ಅಷ್ಟೊಂದು ಸಮಸ್ಯೆಗಳಿವೆ. ನಾವು ಯಾವುದನ್ನು ನಿಶ್ಚಿತವಾಗಿ ಹೇಳಬೇಕೆಂದು ಗೊತ್ತಾಗುವುದಿಲ್ಲ. ಸಾಮಾನ್ಯ ಆಡಳಿತ ವಿಚಾರದಲ್ಲಿ ನಾವು ಮಾತನಾಡಬೇಕಾಗುತ್ತದೆ. ಡಾಕ್ಟರ್‌ಗಳನ್ನು ವರ್ಗಮಾಡಿ ೨–೩ ತಿಂಗಳಾಗಿದೆ. ಅವರು ಇವತ್ತಿನವರೆಗೂ ಅಲ್ಲಿಗೆ ಹೋಗಿಲ್ಲ. ನಾವು ಏನು ಮಾಡಬೇಕು. ಇದನ್ನು ಬಹಳ ದುಃಖದಿಂದ ಮತ್ತು ವ್ಯಸನದಿಂದ ಹೇಳಬೇಕಾಗಿದೆ. ನಮಗೆ ಇಂತಹ ಒಂದು ಕಷ್ಟವನ್ನು ತಾವು ಒದಗಿಸಬೇಡಿ.

ಶ್ರೀಮತಿ ಮೋಟಮ್ಮ.—ಇಷ್ಟೊಂದು ಇಲಾಖೆಗಳ ಬೇಡಿಕೆಗಳ ಮೇಲೆ ಮಾತನಾಡುವಾಗ ಯಾವುದರ ಬಗ್ಗೆ ಮಾತನಾಡುತ್ತೇವೆಂದು ಗೊತ್ತಾಗುವುದಿಲ್ಲ. ಹೊಸ ಸದಸ್ಯರು ಮಾತನಾಡುವಾಗ ಒಂದು ರೀತಿಯ ಕಿಚಿಡಿ–ಪಚಡಿ ಮಾಡಿಕೊಂಡು ಮಾತನಾಡಬೇಕಾಗುತ್ತದೆ. ಆದ್ದರಿಂದ ಇವತ್ತು ಗ್ರಾಮಾಣಾಭಿವೃದ್ಧಿಯ ಇಲಾಖೆಯ ಬಗ್ಗೆ ಮಾತನಾಡಿದರೆ, ನಾಳೆ ಅರಣ್ಯ ಇಲಾಖೆಯ ಬಗ್ಗೆ ಮಾತ ನಾಡಲಿಕ್ಕೆ ಅವಕಾಶ ಕೊಡಬೇಕು ಸೋಮವಾರ ಸಾಮಾನ್ಯ ಆಡಳಿತ ಇಲಾಖೆಯ ಬಗ್ಗೆ ಮಾತನಾಡು ವುದಕ್ಕೆ ಅವಕಾಶ ಕೊಡಬೇಕು. ಎಲ್ಲವನ್ನೂ ಒಂದೇ ದಿವಸ ಮಾತನಾಡಬೇಕೆಂದು ಹೇಳಿದರೆ ಅದು ಅರಣ್ಯರೋಧನವಾಗುತ್ತದೆ.

ಶ್ರೀ ಎನ್. ಚಿಕ್ಕೇಗೌಡ.—ಮಾನ್ಯ ಅಧ್ಯಕ್ಷರೇ, ಇವತ್ತು ಮಾನ್ಯ ಸಚಿವರುಗಳು ಏನು ಬೇಡಿಕೆ ಗಳನ್ನು ಈ ಸದನದ ಮುಂದಿಟ್ಟಿದ್ದಾರೆ ಇದರಲ್ಲಿ ಬಹಳ ಮುಖ್ಯವಾದುದು ವ್ಯವಸಾಯ. ಏಕೆಂದರೆ ಈ ರಾಜ್ಯದಲ್ಲಿ ಅಷ್ಟೇ ಅಲ್ಲ ಇಡೀ ರಾಷ್ಟ್ರದಲ್ಲಿ ನೂರಕ್ಕೆ ೭೫ ಜನ ವ್ಯವಸಾಯಗಾರರಿದ್ದಾರೆ. ಇದೇ ರೀತಿ ತೋಟಗಾರಿಕೆ, ಪಶುಪಾಲನೆ ಕೂಡ ಇದೆ. ಪಶುಪಾಲನೆ ಅಂದರೆ ಇಲ್ಲಿ ಯಾವ ಘೂಕ ಪ್ರಾಣಿ ಗಳೂ ತಮ್ಮ ತೊಂದರೆಗಳ ಬಗ್ಗೆ ಬಂದು ಅರ್ಜಿಗಳನ್ನು ಕೊಡುವುದಿಲ್ಲ. ಬೇರೆ ಎಲ್ಲರೂ ಕೊಡುತ್ತಾರೆ. ಈ ದೇಶದಲ್ಲಿರತಕ್ಕ ಗೋಮಾತೆ ಮತ್ತು ವ್ಯವಸಾಯಕ್ಕೆ ಬೇಕಾದಂಥ ಭೂತಾಯಿ. ಇದರ ಬಗ್ಗೆ ಯಾರೂ ಅರ್ಜಿ ಕೊಟ್ಟು ಸದನದಲ್ಲಿ ಕೇಳುವುದಿಲ್ಲ. ಹೊರಗಡೆಯೂ ಕೇಳುವುದಿಲ್ಲ. ಮತ್ತೆ ತೋಟ ಗಾರಿಕೆಯಲ್ಲಿ ಗಿಡಗಳೂ ಕೂಡ ಮಾತನಾಡುವುದಿಲ್ಲ. ಆದರೆ ಸಂಗೀತವನ್ನು ಕೇಳಿಸಿದರೆ ಹೂವು ಮತ್ತು ಫಲ ಹೆಚ್ಚಿಗೆ ವಿಜ್ಞಾನಿಗಳು ಹೇಳುತ್ತಾರೆ. ಇನ್ನು ಅರಣ್ಯ ಇಲಾಖೆಯ ಬಗ್ಗೆ ಹೇಳುವುದಾದರೆ ಅರಣ್ಯರೋದನವಾಗುತ್ತದೆ. ಏಕೆಂದರೆ ಎಷ್ಟು ಮರಗಳಿವೆ, ಎಷ್ಟು ಕಳ್ಳಸಾಗಾಣಿಕೆ ಯಾಗುತ್ತಿದೆ. ಎಷ್ಟು ಜನ ವೀರಪ್ಪನ್‌ಗಳಿದ್ದಾರೆ, ಎಷ್ಟು ಜನ ಮತ್ತು ಕಿರು ವೀರಪ್ಪನ್‌ಗಳು ಇದ್ದಾರೆ, ಅದರಲ್ಲಿ ಎಷ್ಟು ಜನ ಅಧಿಕಾರಿಗಳು ಶಾಮೀಲಾಗಿದ್ದಾರೆ? ಇದು ದೊಡ್ಡ ಇಲಾಖೆ...

ಅಧ್ಯಕ್ಷರು.—ಮರು, ಕಿರು ಸೂಪರ್ ವೀರಪ್ಪನ್‌ಗಳಿಲ್ಲವೇ?

ಶ್ರೀ ಎಸ್. ಚಿಕ್ಕೇಗೌಡ.—ಸೂಪರೂ ಉಂಟು ಎಂದು ಕಾಣುತ್ತದೆ. ಏಕೆಂದರೆ, ತೇಗದಮರ ಸೂಪರ್. ಇನ್ನು ಮಾನ್ಯ ಮುಖ್ಯಮಂತ್ರಿಗಳಿಗೆ ಸಂಬಂಧಪಟ್ಟಂಥ ಜನರಲ್ ಅಡ್ಮಿನಿಸ್ಟ್ರೇಷನ್ ಇಲಾಖೆ ಇದೆ, ಹೋಂ ಇದೆ, ಜೈಲು ಇದೆ. ಈ ಎಲ್ಲ ಖಾತೆಗಳಿಗೂ ಹೆಚ್ಚಿಗೆ ಅದ್ಯತೆಯನ್ನು ಕೊಡದಿದ್ದರೆ ಹೇಗೆ? ವ್ಯವಸಾಯದ ಬಗ್ಗೆ ಮಾತನಾಡುವುದಕ್ಕೆ ೩ ದಿವಸ ಅವಕಾಶ ಕೊಟ್ಟರೂ ಸಾಲದು ಕೊಬ್ಬರಿ ಅಡಿಕೆ, ಬಾಳೆ ಇನ್ನೂ ಮುಂತಾದ ವಿಚಾರಗಳ ಬಗ್ಗೆ ಮಾತನಾಡಬೇಕಾಗಿದೆ. ಇದಕ್ಕೆ ೪–೫ ದಿವಸ ಅವಕಾಶ ಕೊಟ್ಟರೂ ಸಾಲದು. ಇಂಥ ಇಲಾಖೆಯ ಮೇಲೆ ಇಂಥ ಸದಸ್ಯರು ಇಷ್ಟೇ ಹೊತ್ತು ಮಾತ ನಾಡಬೇಕೆಂದು ಯಾರಿಗೂ ಸೀಮಿತಗೊಳಿಸುವುದಕ್ಕೆ ಸಾಧ್ಯವಿಲ್ಲ. ದಯವಿಟ್ಟು ಹೆಚ್ಚಿಗೆ ಕಾಲಾವಕಾಶ ಕೊಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಎಂ.ಪಿ. ವೆಂಕಟೇಶ್.—ತಾವು ಒಬ್ಬೊಬ್ಬ ಸದಸ್ಯರಿಗೆ ೧೦–೧೦ ನಿಮಿಷ ಬೇರೆ ಸಮಯದಲ್ಲಿ ಮಾತನಾಡಲು ಅವಕಾಶ ಕೊಡುತ್ತೀರಿ. ಆದರೆ ಇವತ್ತು ೫ ಮಂತ್ರಿಗಳ ಬೇಡಿಕೆಗಳು ಇರುವುದರಿಂದ ಕನಿಷ್ಟ ಒಬ್ಬೊಬ್ಬ ಸದಸ್ಯರಿಗೆ ೧ ಗಂಟೆ ಕಾಲವಾದರೂ ಅವಕಾಶ ಕೊಡಬೇಕು.

ಶ್ರೀ ಗೋಪಿನಾಥ ಆರ್. ಪಾಂಡ್ರ.—ವಿರೋಧಪಕ್ಷದವರಿಗೆ ಬಹಳ ಹೊತ್ತು ಅವಕಾಶವನ್ನು ತಾವು ಕೊಡುತ್ತೀರಿ, ನಮಗೆ ೫ ನಿಮಿಷ ಕೊಟ್ಟು ಅಷ್ಟರಲ್ಲೇ ಬೆಲ್ ಹೊಡೆಯುತ್ತೀರಿ. ಆದ್ದರಿಂದ ಅವರಿಗೆ ಎಷ್ಟು ಸಮಯ ಅವಕಾಶವನ್ನು ಕೊಡುತ್ತೀರೋ ಅಷ್ಟೇ ಸಮಯವನ್ನು ನಮಗೂ ಕೊಡಬೇಕು.

೧೦-೦೦ ಎ.ಎಂ.

ಶ್ರೀ ಬಿ. ಸ್ವಾಮಿನಾಥ್.—ಮಾನ್ಯ ಅಧ್ಯಕ್ಷರೇ ಮಾನ್ಯ ಫೋರ್ಡೆಯವರ ಖಾತೆ ಜಿಲ್ಲಾಪರಿಷತ್ ಮಂಡಲ್ ಪಂಚಾಯತ್ ಇದೆಯಲ್ಲ ಅದೊಂದೇ ಖಾತೆ ಬಗ್ಗೆ ಚರ್ಚೆ ಮಾಡುವುದಕ್ಕೆ ಮೂರು ದಿವಸ ಸಾಕಾಗುವುದಿಲ್ಲ. ಇದರ ಕಾರ್ಯ ವೈಖರಿಯನ್ನು ಬಹಳ ಜನರು ಹೇಳಬೇಕಾಗಿದೆ. ತಮ್ಮ ಅಭಿಪ್ರಾಯ ಗಳನ್ನು ವ್ಯಕ್ತಪಡಿಸಬೇಕಾಗಿದೆ. ಆದ್ದರಿಂದ ದಯವಿಟ್ಟು ಈ ಒಂದು ಖಾತೆ ಬಗ್ಗೆ ಮಾತನಾಡುವುದಕ್ಕೆ ಮೂರು ದಿವಸಗಳನ್ನು ಒದಗಿಸಿಕೊಡಬೇಕೆಂದು ಹೇಳುತ್ತೇನೆ.

ಶ್ರೀ ಬಿ.ಎಂ. ಇದಿನಬ್ಬ.—ಮಾನ್ಯ ಅಧ್ಯಕ್ಷರೇ, ಬಹಳ ಪ್ರಾಮುಖ್ಯವಾದ ೫ ಮಂತ್ರಿಗಳ ಬೇಡಿಕೆಗಳ ಬಗ್ಗೆ ಇವತ್ತು ನಾಳೆ. ನಾಡಿದ್ದು ಎಂದು ಹೇಳಿದರೂ ಒಂದೊಂದರ ಬಗ್ಗೆ ಎರಡೆರಡು ದಿವಸಗಳು ಮಾತನಾಡಬೇಕಾಗುತ್ತದೆ. ಮಾನ್ಯ ಫೋರ್ಡೆಯವರ ಅರಣ್ಯ ಇಲಾಖೆಯ ಮೇಲೆ ಬೇಕಾದಷ್ಟು ಮಾತನಾಡುವುದು ಇದೆ. ಇಡೀ ದೇಶವನ್ನೇ ಉಳಿಸುವಂಥ ಈ ಅರಣ್ಯ ಏನಾಗಿದೆ ಎನ್ನುವುದನ್ನು ಹೇಳಬೇಕಾಗಿದೆ. ಅದೇರೀತಿ ಮಾನ್ಯ ಮುಖ್ಯಮಂತ್ರಿಗಳ ಸಾಮಾನ್ಯ ಆಡಳಿತ ಇಲಾಖೆಯ ಬಗ್ಗೆ ಮಾತನಾಡುವುದು ಜಾಸ್ತಿ ಇರುವುದರಿಂದ ತಾವು ಅವಕಾಶವನ್ನು ಜಾಸ್ತಿ ಮಾಡಿ ಕೊಡಬೇಕೆಂದು ಹೇಳುತ್ತೇನೆ.

ಶ್ರೀ ಎಂ.ವಿ. ವೆಂಕಟಪ್ಪ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಏನು ಹೇಳಿದರು ಅವ ನ್ನು ನಾನು ಪುಷ್ಟೀಕರಿಸುತ್ತೇನೆ. ಇಲ್ಲಿ ಹೊಸ ಸದಸ್ಯರು ಬೇಕಾದಷ್ಟು ಜನ ಬಂದಿದ್ದಾರೆ. ವಿರೋಧ ಪಕ್ಷದವರಿಗೆ ಎಷ್ಟು ಸಮಯ ಕೊಡುತ್ತೀರೋ ಅಷ್ಟೇ ಸಮಯ ನಮ್ಮ ಪಕ್ಷದವರಿಗೆ - ಕೂಡ ಕೊಡ ಬೇಕು. ಕಾರಣವೇನೆಂದರೆ. ಮಾತದಾರರು ಬಹಳ ಎಚ್ಚೆತ್ತಿದ್ದಾರೆ. ನಾವು ಕಾನ್‌ಸ್ಟಿಟ್ಯೂಯನ್ಸಿಗೆ ಹೋದಾಗ ಏನ್ರಿ ನೀವೆಲ್ಲ ನಿದ್ದೆ ಹೋಗುತ್ತಿರುತ್ತೀರಾ. ಸ್ವಲ್ಪವೂ ಮಾತನಾಡುವುದಿಲ್ಲವೆಂದು ಕೇಳ ತ್ತಾರೆ. ಎರಡು ಸಲ ಸದನ ನಡೆದಾಗ ನಮ್ಮ ಪಕ್ಷದವರಿಗೆ ಸರಿಯಾಗಿ ಮಾತನಾಡುವುದಕ್ಕೆ ಸಮಯ ಸಿಕ್ಕಲಿಲ್ಲ. ಆದ್ದರಿಂದ ಇವತ್ತು ೬ ರಿಂದ ೮ ಗಂಟೆಯವರೆಗೂ ಸದನವನ್ನು ಮುಂದುವರಿಸಿ, ನಾವೆಲ್ಲಾ ಕುಳಿತಿರುತ್ತೇವೆ. ನಾವು ಯಾರು ಬೇಕೋ ಅವರು ಮಾತನಾಡುತ್ತೇವೆ. ನಮ್ಮ ಪಕ್ಷದವರಿಗೂ ಮಾತನಾಡಲು ಸಮಯವನ್ನು ಒದಗಿಸಿಕೊಡಿ ಎಂದು ಹೇಳುತ್ತೇನೆ.

ಅಧ್ಯಕ್ಷರು.—ಈಗ ಮಾನ್ಯ ಕಾಗೋಡು ತಿಮ್ಮಪ್ಪನವರು, ಮಾನ್ಯ ಚಿಕ್ಕೇಗೌಡರು, ಮಾನ್ಯ ವೆಂಕಟಪ್ಪನವರು ಮತ್ತಿತರ ಸದಸ್ಯರು ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಮೊದಲು ಈ ಸದನದ ಕಾರ್ಯಕಲಾಪಗಳು ಬಂದಾಗ ಜೂನ್ ೪ನೇ ತಾರೀಖಿನಿಂದ ಜುಲೈ ೧೩ನೇ ತಾರೀಖಿನವರೆಗೆ ನಡೆಯಬೇಕೆಂದು ಇತ್ತು. ೧೩ನೇ ತಾರೀಖು ಅಪ್ರೊಪ್ರಿಯೇಷನ್ ಬಿಲ್ ಪಾಸ್ ಮಾಡಬೇಕು ಎನ್ನುವ ಒರಿಜಿನಲ್ ಕ್ಯಾಲೆಂಡರ್ ಏನಿತ್ತು ಅದನ್ನು ನಮಗೆ ಸರ್‌ಕ್ಯುಲೇಷನ್ ಮಾಡಿತ್ತು. ಯಾವಾಗಲೂ ಸಭೆಯ ಕಾರ್ಯಕಲಾಪಗಳು ಕ್ಯಾಲೆಂಡರ್‌ನಲ್ಲಿ ನಮೂದಿಸಿದಂತೆ ನಡೆಯಲು ಸಾಧ್ಯವಾಗುವುದಿಲ್ಲ. ಕೆಲವು ಬೇಡಿಕೆಗಳಿಗೆ ಜಾಸ್ತಿ ಟೈಮ್ ಸಿಗುತ್ತದೆ. ಕೆಲವಕ್ಕೆ ಕಡಿಮೆ ಟೈಮ್ ಸಿಗುತ್ತದೆ. ಈ ಮಧ್ಯೆ ಮಿಕ್ಕ ವಿಚಾರಗಳನ್ನೂ ಕೂಡ ಸಭೆ ಜರುಗಿಸಿ ಗಮನಿಸಬೇಕಾಗುತ್ತದೆ. ಚರ್ಚೆಮಾಡಬೇಕಾಗುತ್ತದೆ. ಅದನ್ನೂ ಕೂಡ ನಾವು ಮಾಡಿದ್ದೇವೆ. ಆದ್ದರಿಂದ ನನ್ನ ಮುಂದೆ ಇದ್ದಂಥ ಹಾರ್ಡ್ ಆಪ್‌ಷನ್ ಯಾವುದೆಂದರೆ, ಎಲ್ಲ ಬೇಡಿಕೆಗಳನ್ನು ಒಟ್ಟಿಗೆ ಮೂರು ದಿವಸಗಳ ಚರ್ಚೆಗೆ ಹಾಕತಕ್ಕಂಥದ್ದು. ಇಲ್ಲದೆ ಹೋದರೆ ಯಾವುದಾದರೂ ಒಂದೆರಡು ಬೇಡಿಕೆಗಳಿಗೆ ಒಂದೆರಡು ದಿವಸ ಅವಕಾಶಕೊಟ್ಟು ಮೂರನೇ ಬೇಡಿಕೆಯನ್ನು ಥಿಲಬಿನ್‌ಗೆ ಹಾಕಬೇಕಾದಂಥ ಹಾರ್ಡ್ ಆಪ್‌ಷನ್‌ನನ್ನು ಸ್ಪೇರ್ ಮಾಡುತ್ತಿತ್ತು. ಆದ್ದರಿಂದ ಸದನಕ್ಕೆ ಅನುಕೂಲವಾಗಲಿ ಎನ್ನತಕ್ಕಂಥ ದೃಷ್ಟಿಯಿಂದ ಈ ಎಲ್ಲ ಬೇಡಿಕೆಗಳನ್ನು ಒಟ್ಟಿಗೆ ಸದನದ ಚರ್ಚೆಗೆ ನಾನು ಹಾಕಿದ್ದೇನೆ. ನನಗೂ ಗೊತ್ತು. ಇದು Perhaps, unprecented; and strictly in conmformity with parliamentary procedure. But this is certainly better then guillotining the demands. I am sure you would appreciate this attitude.

ಎರಡನೆಯದಾಗಿ, ಒಬ್ಬರು ಅರಣ್ಯ ರೋದನವೆಂದು ಹೇಳಿದರು. ನಿಮ್ಮ ಚರ್ಚೆ, ನಿಮ್ಮ ಭಾಷಣ ಮತ್ತು ಮಂತ್ರಿಗಳ ರಿಪ್ಲೈಯನ್ನು ಅರಣ್ಯ ರೋದನವೆಂತಲೂ ತಾವು ಕರೆಯಬಹುದು. ಅದನ್ನು ನಿಮಗೆ ಬಿಟ್ಟುಬಿಡುತ್ತೇನೆ. I am not going to express any opinion. ಈಗ ಒಟ್ಟಿಗೆ ಚರ್ಚೆ ಶುರುವಾಗಿದೆ. ಆದ್ದರಿಂದ ಮಾನ್ಯ ವೆಂಕಟಪ್ಪನವರ ಸಲಹೆಯನ್ನು ಒಪ್ಪುತ್ತೇನೆ. ಸದನದ ಸದಸ್ಯರು ಅಭಿಪ್ರಾಯಪಟ್ಟರೆ ನಾವು ಎರಡು ಗಂಟೆಕಾಲ ಜಾಸ್ತಿ ಕುಳಿತು ಇನ್ನೂ ಹೆಚ್ಚು

ಸದಸ್ಯರು ಈ ಬೇಡಿಕೆಗಳ ಚರ್ಚೆಯಲ್ಲಿ ಭಾಗವಹಿಸುವುದಕ್ಕೆ ಅವಕಾಶವನ್ನು ಕಲ್ಪಿಸಿಕೊಡತಕ್ಕಂಥದ್ದು ಒಂದೇ ಇವತ್ತು ನಮಗೆ ಇರತಕ್ಕಂಥ ಪರಿಹಾರ. ಅದಕ್ಕೆ ಮಿಗಿಲಾದದು ಏನೂ ಇಲ್ಲ.

ವಿತ್ತೀಯ ಕಾರ್ಯಕಲಾಪಗಳು

೧೯೬೦–೬೧ನೇ ಸಾಲಿನ ಅನುದಾನಗಳ ಬೇಡಿಕೆಗಳ ಮೇಲಿನ ಚರ್ಚೆ

(ಬೇಡಿಕೆಗಳ ಸಂಖ್ಯೆ ೨೯, ೫೭, ೫೮, ೪, ೨೪, ೧, ೨, ೩, ೨೭, ೨೮, ೩೯, ೪೦, ೪೧, ೪೨ ಮತ್ತು ೪೩)

† ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ).—ಮಾನ್ಯ ಅಧ್ಯಕ್ಷರೇ, ಈ ಸದನದಲ್ಲಿ ಇಷ್ಟೊಂದು ಬೇಡಿಕೆಗಳನ್ನು ಮಂಡಿಸಿರುವ ಬಗ್ಗೆ ತಾವೂ ಸಹ ಒಂದು ರೀತಿಯ ಅಸಹಾಯಕತೆಯ ಪಾತನಾಡಿದ್ದನ್ನು ಮೆಚ್ಚುತ್ತೇನೆ. ಯಾವಾಗಲೂ ಕೂಡ ಇಷ್ಟೊಂದು ಬೇಡಿಕೆಗಳು ಸುದೀರ್ಘವಾಗಿ ಈ ಸದನದಲ್ಲಿ ನಡೆದಿರಲಿಲ್ಲ. ಆದರೂ ಸಹ ಅನೇಕ ಕಾರಣಗಳಿಂದ ಇದನ್ನು ಮಾಡಬೇಕಾಗುತ್ತದೆಂದು ತಾವು ಸದನಕ್ಕೆ ಒಂದು ವಚನ ನೀಡಿದ್ದೀರಿ ಇವತ್ತು ಈ ಬೇಡಿಕೆಗಳ ಬಗ್ಗೆ ಚರ್ಚೆಯನ್ನು ಪ್ರಾರಂಭಿಸುತ್ತಾ ಅತಿ ಮುಖ್ಯವಾದ ಗ್ರಾಮೀಣ ಅಭಿವೃದ್ಧಿ ಇಲಾಖೆಯ ಬಗ್ಗೆ ಕೆಲವು ವಿಚಾರಗಳನ್ನು ಹೇಳುತ್ತೇನೆ. ಜಿಲ್ಲಾ ಪರಿಷತ್ತು ಮತ್ತು ಮಂಡಲ ಪಂಚಾಯಿತಿಗಳ ಅಸ್ತಿತ್ವ ನಿಜವಾಗಲೂ ಪ್ರಜಾಪ್ರಭುತ್ವದಲ್ಲಿ, ಪಂಚಾಯತ್‌ರಾಜ್ ಇತಿಹಾಸದಲ್ಲಿ ಒಂದು ಕ್ರಾಂತಿಕಾರಕವಾದ ಬೆಳವಣಿಗೆ ಎಂದು ನಾನಾದರೂ ತಮ್ಮ ಮೂಲಕ ತಿಳಿಸುತ್ತಿದ್ದೇನೆ. ಇವತ್ತು ಯಾವ ಒಂದು ಪ್ರಜಾಪ್ರಭುತ್ವದ ತಳಹದಿಯ ಮೇಲೆ ಗ್ರಾಮ ಸ್ವರಾಜ್ಯ, ಗ್ರಾಮ ಚಿಂತನೆ, ಗ್ರಾಮ ಪ್ರಭುತ್ವ, ಅಧಿಕಾರ ವಿಕೇಂದ್ರೀಕರಣ ಎಂಬ ವಿಚಾರಗಳನ್ನು ನಾವು ಮಾತನಾಡುತ್ತಿದ್ದೇವೆ ಇದನ್ನು ಕೃತಿಯಲ್ಲಿ ಇಳಿಸತಕ್ಕದ್ದು ದೇಶದ ಹಿರಿಯ ನಾಯಕರಾದ, ದೇಶಕ್ಕೆ ಸ್ವಾತಂತ್ರ್ಯವನ್ನು ತಂದುಕೊಟ್ಟಂತಹ ರಾಷ್ಟ್ರಪಿತ ಗಾಂಧೀಜಿಯವರ ಕನಸು, ಜಯಪ್ರಕಾಶ್ ನಾರಾಯಣರ ಕನಸು. ಈ ಒಂದು ಜಿಲ್ಲಾ ಪರಿಷತ್ತು ಮತ್ತು ಮಂಡಲ ಪಂಚಾಯಿತಿಗಳ ಸೃಷ್ಟಿಯಿಂದ ನನಸಾಗತಕ್ಕ ಒಂದು ಕ್ರಾಂತಿಕಾರಕವಾದ ಬೆಳವಣಿಗೆ ಎಂದು ನಾನು ಕರೆಯುತ್ತಿದ್ದೇನೆ. ಇದನ್ನು ಈ ಸಂದರ್ಭದಲ್ಲಿ ನಾನು ತಮ್ಮ ಮೂಲಕ ದಿವಂಗತ ನಜೀರ್ ಸಾಬ್ ಅವರು ಯಾವುದೇ ಪಕ್ಷದಲ್ಲಿ ಇರಲಿ, ಅವರು ಹಿಂದಿನ ಸರ್ಕಾರದಲ್ಲಿ ಗ್ರಾಮೀಣ ಅಭಿವೃದ್ಧಿ ಸಚಿವರಾಗಿ ಈ ಒಂದು ಕಲ್ಪನೆಯನ್ನು ಅಳವಡಿಸಿಕೊಂಡು ಗ್ರಾಮ ಸ್ವರಾಜ್ಯ ಅನ್ನುವ ಒಂದು ತತ್ವದ ಆಧಾರದ ಮೇಲೆ ಜಿಲ್ಲಾ ಪರಿಷತ್ತು ಮತ್ತು ಮಂಡಲ ಪಂಚಾಯಿತಿಗಳ ರಚನೆಗೆ ಸೂಕ್ಷ್ಮ ಶ್ರಮವಹಿಸಿ ಜಿಲ್ಲಾ ಪರಿಷತ್ತು ಮತ್ತು ಮಂಡಲ ಪಂಚಾಯಿತಿಗಳ ಶಿಲ್ಪಿಯಾಗಿ ಮೆರೆದರು. ಇವತ್ತು ಅವರು ನಮ್ಮ ಮುಂದಿಲ್ಲ. ಆದರೂ ಸಹ ಇವತ್ತು ಜಿಲ್ಲಾ ಪರಿಷತ್ತು ಮತ್ತು ಮಂಡಲ ಪಂಚಾಯಿತಿಗಳ ಬಗ್ಗೆ ಅಪಾರವಾದ ಅಪಸ್ವರ ಬರುತ್ತಿದೆ. ಈ ಅಪಸ್ವರಕ್ಕೆ ಕಾರಣ ಇಲ್ಲವೆಂದು ನಾನಾದರೂ ಅಂದುಕೊಂಡಿಲ್ಲ. ಮಾನ್ಯ ನಜೀರ್‌ಸಾಬರು ಇದೆಲ್ಲವನ್ನು ಚಿಂತನೆ ಮಾಡಿ ಸ್ವಲ್ಪ ಬದಲಾವಣೆ ಮಾಡಿ ಇನ್ನೂ ಹೊಸ ರೂಪ ಕೊಡಬಹುದಿತ್ತು ಎಂದು ನನಗನ್ನಿಸುತ್ತದೆ. ಈಗಲೂ ಸಹ ಜಿಲ್ಲಾ ಪರಿಷತ್ತು ಮತ್ತು ಮಂಡಲ ಪಂಚಾಯಿತಿಗಳ ಅಸ್ತಿತ್ವಕ್ಕೆ ಯಾವುದೇ ಭಂಗ ಬಾರದ ರೀತಿಯಲ್ಲಿ ಸಾಸಕರಿಗೂ, ಮಂಡಲ ಪಂಚಾಯಿತಿಯ ಸದಸ್ಯರಿಗೂ ಮಧ್ಯೆ ಯಾವುದೇ ಒಂದು ಅಧಿಕಾರದಲ್ಲಿ ದೊಡ್ಡ ಗೊಂದಲವಾಗದ ರೀತಿಯಲ್ಲಿ ಕೆಲವು ತಿದ್ದುಪಡಿಗಳನ್ನು ಮಾಡಬಹುದು. ಏಕೆಂದರೆ. ಈ ದೇಶದಲ್ಲಿ ಸಂವಿಧಾನವನ್ನೇ ಅನೇಕ ಬಾರಿ ತಿದ್ದುಪಡಿ ಮಾಡಿರತಕ್ಕದ್ದು ಗೊತ್ತಿದೆ. ಆದರೆ ಜಿಲ್ಲಾ ಪರಿಷತ್ತು ಮತ್ತು ಮಂಡಲ ಪಂಚಾಯಿತಿಗಳಿಗೆ ಸಂಬಂಧಪಟ್ಟ ಕೆಲವು ವಿಚಾರಗಳ ಬಗ್ಗೆ ತಿದ್ದುಪಡಿ ಮಾಡುವುದರಲ್ಲಿ ಏನು ಆಕಾಶ ಕಳಚಿಬೀಳುವುದಿಲ್ಲ.

(ಉಪಾಧ್ಯಕ್ಷರು–ಅಧ್ಯಕ್ಷರ ಸ್ಥಾನವನ್ನಲಂಕರಿಸಿದರು)

ಆದರೆ ತಿದ್ದುಪಡಿ ಮಾಡುವ ಒಂದು ಕಲ್ಪನೆ ತಮ್ಮಲ್ಲಿ ಏನು ಇದೆ, ಆದು ಸಮಗ್ರವಾಗಿ ಜಿಲ್ಲಾ ಪರಿಷತ್ತು ಹಾಗೂ ಮಂಡಲ್ ಪಂಚಾಯಿತಿಗಳನ್ನು ಮುಚ್ಚಿ ಹಾಕತಕ್ಕ ವ್ಯವಸ್ಥೆಯಾಗಬಾರದು. ಇವತ್ತು ಅಧಿಕಾರ ವಿಕೇಂದ್ರೀಕರಣದ ಬಗ್ಗೆ ಮಾತನಾಡುತ್ತಿದ್ದೇನೆ, ಪ್ರಜಾಪ್ರಭುತ್ವದ ಬಗ್ಗೆ ಮಾತನಾಡುತ್ತಿದ್ದೇವೆ. ಗ್ರಾಮ ಸ್ವರಾಜ್ಯದ ಬಗ್ಗೆ ತಾವು ಚಿಂತನೆ ಮಾಡುತ್ತಿದ್ದೀರಿ. ಆದರೆ ಇವತ್ತು ಎಲ್ಲಿಗೆ ಹೋಗಿದ್ದೇವೆ ? ನಿಜ. ಜಿಲ್ಲಾ ಪರಿಷತ್ತು ಮತ್ತು ಮಂಡಲ್ ಪಂಚಾಯಿತಿಗಳ ಮೇಲೆ ಗದಾ ಪ್ರಹಾರ ಮಾಡತಕ್ಕ ಚಿಂತನೆ ನಿಮ್ಮಲ್ಲಿ ಉದ್ಭವ ವಾಗುತ್ತಿದೆ. ಇದು ಸರಿಯಲ್ಲ. ಜಿಲ್ಲಾ ಪರಿಷತ್ತುಗಳಿಗೂ ಮತ್ತು ಮಂಡಲ್ ಪಂಚಾಯಿತಿಗಳಿಗೂ

† ಈ ಚಿಹ್ನೆ ಸಂಬಂಧಪಟ್ಟ ಸದಸ್ಯರು ಭಾಷಣ ಅಥವಾ ಟಿಪ್ಪಣಿಯನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.